


**ಚಿನ್ನ, ಬೆಳ್ಳಿ ಒಡವೆಗಳನ್ನೇ ಮಾರ್ಪಡಿಸಿ, ಕಪ್ಪು ಬಣ್ಣದ ಛಾಯೆ ಮೂಡುವಂತೆ ಮಾಡಿ ಕುಸುರಿ ಕೆಲಸವಿರುವ ಆಕ್ಸಿಡೈಸ್ಡ್ ಆಭರಣ ಇಂದಿನ ಹೊಸ ಫ್ಯಾಷನ್ ಟ್ರೆಂಡ್!**

ಹೇಳುತ್ತಾರೆ ಬೆಂಗಳೂರಿನ ಜಯನಗರದಲ್ಲಿರುವ ಫ್ಯಾಷನ್ ತಜ್ಞೆ ಪ್ರಿಯಾಂಕ ದೇಸಾಯಿ.

ಆಕ್ಸಿಡೈಸ್ಡ್ ಒಡವೆಯಲ್ಲಿ ಹಲವು ವೈವಿಧ್ಯಗಳಿವೆ. ಬೆಳ್ಳಿ, ಚಿನ್ನ, ಟ್ರೈಬಲ್ ಜ್ಯುವೆಲ್ಲರಿ, ಗೋಥಿಕ್ ಜ್ಯುವೆಲ್ಲರಿ ಹಾಗೂ ಹ್ಯಾಂಡ್ ಕ್ರಾಫ್ಟೆಡ್ (ಕೈಕುಸುರಿ) ಜ್ಯುವೆಲ್ಲರಿ... ಹೀಗೆ. ಇಂಥ ಒಡವೆಗಳು ಮಳಿಗೆಗಳಿಗಿಂತ ಹೆಚ್ಚಾಗಿ ಪ್ರದರ್ಶನಗಳಲ್ಲಿ, ವ್ಯಾಪಾರಿ ಮೇಳಗಳಲ್ಲಿ, ಸಮ್ಮೇಳನಗಳ ಸ್ಟಾಲ್‌ಗಳಲ್ಲಿ ಹೆಚ್ಚಾಗಿ ಸಿಗುತ್ತವೆ. ಆಯ್ಕೆಗಳೂ ಹೆಚ್ಚಿರುತ್ತವೆ.

ಬ್ಲ್ಯಾಕ್ ಮೆಟಲ್‌ನಂತೆ ಕಾಣುವ ಈ ಮಾದರಿಯ ಒಡವೆಗಳು ತಮ್ಮ ಕಪ್ಪು ಬಣ್ಣದ ಛಾಯೆಯಿಂದ ಎಲ್ಲಾ ಬಗೆಯ ಉಡುಪುಗಳ ಜೊತೆ ಆರಾಮವಾಗಿ ಹೊಂದಿಕೊಳ್ಳುವುದೇ ಈ ಆಭರಣದ ಪ್ಲಸ್ ಪಾಯಿಂಟ್. ಹಿಂದೆಲ್ಲ ಚಿನ್ನ ಅಥವಾ ರೋಲ್ಡ್ ಗೋಲ್ಡ್ ಒಡವೆಗಳಲ್ಲೇ ಶೃಂಗಾರ ಮಾಡಿಕೊಳ್ಳಬೇಕಿತ್ತು. ಮಹಿಳೆಯರಿಗೆ ಹೆಚ್ಚಿನ ಆಯ್ಕೆಗಳಿರಲಿಲ್ಲ. ಆದರೆ ಈಗ ಪ್ರತಿನಿತ್ಯವೂ ಒಂದಲ್ಲ ಒಂದು ರೀತಿಯ ಉಡುಪು, ಒಡವೆಗಳು ಮಾರುಕಟ್ಟೆಗೆ ಬರುತ್ತಿದ್ದು ಮಹಿಳೆಯರಿಗೆ ಆಯ್ಕೆ ಮಾಡಲು ಗಲಿಬಿಲಿಗೊಳ್ಳುವಷ್ಟು ವೈವಿಧ್ಯಗಳು ಇವೆ. ಹೀಗಾಗಿ ಒಡವೆಗಳ ಮಟ್ಟಿಗೆ ಹಳದಿ ಲೋಹದ ಮೇಲಿನ ಕ್ರೇಜ್ ಹೋಗಿ ಆಕ್ಸಿಡೈಸ್ಡ್ ಒಡವೆ ಮೇಲೆ ಮೋಹ ಬೆಳೆದಿದೆ.







ಆಕ್ಸಿಡೈಸ್ಡ್ ಆಭರಣ ಕಳಪೆ ಮಟ್ಟದ್ದು ಅಲ್ಲವೇ ಅಲ್ಲ. ಬೆಳ್ಳಿ ಹಾಗೂ ಚಿನ್ನದ ಆಭರಣಗಳಲ್ಲಿ ಕಪ್ಪು ಬಣ್ಣದ ಛಾಯೆ ಇರುವ ಆಭರಣಗಳೇ ಆಕ್ಸಿಡೈಸ್ಡ್ ಆಭರಣವಾಗಿ ರೂಪುಗೊಳ್ಳುತ್ತವೆ. ಹಾಗಾದರೆ ಈ ಆಭರಣ ತಯಾರಾಗುವುದು ಹೇಗೆ ಎಂಬುದೇ ಕುತೂಹಲಕಾರಿ. ಜ್ಯುವೆಲ್ಲರಿ ಉದ್ಯಮದಲ್ಲಿ ಲೋಹಗಳನ್ನು ಕಪ್ಪು ಮಾಡಲು ಸಲ್ಫರ್ ಉಪಯೋಗಿಸುತ್ತಾರೆ. ಬೆಳ್ಳಿ ಜೊತೆಗೆ ಸಲ್ಫರ್ ಆಕ್ಸೈಡ್ ಬಳಸಿ, ಆ ಲೋಹಕ್ಕೆ ಕಪ್ಪು ಅಥವಾ ಬೂದಿ ಬಣ್ಣದ ಶೇಡ್ ನೀಡುತ್ತದೆ. ಈ ಕಪ್ಪು ಛಾಯೆಯೇ ಎದ್ದು ಕಾಣುವಂತಿದ್ದು ಹೆಂಗಳೆಯರ ಮನಸ್ಸನ್ನೂ ಕದ್ದಿದೆ.

## ಬಹು ಆಯ್ಕೆಗಳಿವೆ

‘ಆಕ್ಸಿಡೈಸ್ಡ್ ಆಭರಣ ಚಿನ್ನ ಹಾಗೂ ಬೆಳ್ಳಿ ಎರಡರಲ್ಲೂ ಸಿಗುತ್ತವೆ. ಆಕರ್ಷಕವಾಗಿ ಕಾಣುವ ಕಾರಣದಿಂದ ಬೆಳ್ಳಿ ಆಭರಣಗಳಿಗೆ ಹೆಚ್ಚು ಬೇಡಿಕೆ. ಚಿನ್ನದ ಆಕ್ಸಿಡೈಸ್ಡ್ ಆಭರಣಗಳಿಗಿಂತಲೂ ಹೆಚ್ಚು ಎದ್ದು ಕಾಣುವುದು ಹಾಗೂ ಬೆಲೆ ಕಡಿಮೆ ಇದಕ್ಕೆ ಕಾರಣ. ನೆಕ್ಲೇಸ್, ಹಾರ, ಕಿವಿಯೋಲೆ, ಪೆಂಡೆಂಟ್, ಬಳೆ ಎಲ್ಲವೂ ಇದರಲ್ಲಿ ಲಭ್ಯ. ಈ ಆಭರಣಗಳೂ ಆ್ಯಂಟಿಕ್ ಆಭರಣಗಳಂತೆಯೂ ಕಾಣುತ್ತದೆ ವಿನ್ಯಾಸದಲ್ಲೂ ಬಹು ಆಯ್ಕೆಗಳಿವೆ’ ಎನ್ನುತ್ತಾರೆ ಆಭರಣ ವರ್ತಕಿ ಪ್ರಶಾಂತಿನಿ ಪಾಟೀಲ್.

‘ಈಗ ಜೀನ್ಸ್, ಸಲ್ವಾರ್, ಶರ್ಟ್, ಪಾಶ್ಚಾತ್ಯ ಉಡುಗೆ ಜೊತೆಗೂ ಆಕ್ಸಿಡೈಸ್ಡ್ ಆಭರಣ ತೊಡುವುದು ಟ್ರೆಂಡ್ ಆಗಿದೆ. ಈ ಒಡವೆಗಳು ಅಚ್ಚ ಬಣ್ಣಗಳು, ಗಾಢ, ತಿಳಿ ಮಾತ್ರವಲ್ಲ, ಎಲ್ಲಾ ಬಣ್ಣದ ಬಟ್ಟೆಗಳಿಗೂ ಹೊಂದಿಕೊಳ್ಳುತ್ತವೆ. ಮದುವೆ, ಮುಂಜಿಗಳಂತ ಶುಭ ಸಮಾರಂಭಗಳಲ್ಲಿ, ಹಬ್ಬಗಳಂತಹ ಸಾಂಪ್ರದಾಯಿಕ ಸಂದರ್ಭದಲ್ಲಿ ಬೆಳ್ಳಿ ಜರಿ ಹೊಂದಿದ ಸೀರೆ, ಚೂಡಿದಾರ್ ಮೇಲೆ ಈ ಆಭರಣಗಳು ಸಖತ್ ಲುಕ್ ಕೊಡುತ್ತದೆ. ರೇಷ್ಮೆ ಸೀರೆ, ಕುರ್ತಾ ಮೇಲೆಯೂ ಆಕ್ಸಿಡೈಸ್ಡ್ ಹಾರ, ನೆಕ್ಲೇಸ್, ಕಿವಿಯೋಲೆ ಸರಿಯಾಗಿ ಹೊಂದಿಕೆಯಾಗುತ್ತದೆ’ ಎನ್ನುತ್ತಾರೆ ಪ್ರಶಾಂತಿನಿ.